**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

**ಸಿ.ಸಿ. ಸಂಖ್ಯೆ ಃ 808/2016**

**ಚಾಸಾ ಃ 16**
**ಪ್ರಾಸಾ ಃ 12**

| | |
|---|---|
| **ಹೆಸರು** | ಃ ಬಿ ಆರ್ ಲಿಂಗಪ್ಪ |
| **ತಂದೆಯ ಹೆಸರು** | ಃ ರಾಮಣ್ಣ |
| **ವಯಸ್ಸು** | ಃ 65 ವರ್ಷ |
| **ಉದ್ಯೋಗ** | ಃ ನಿವೃತ್ತ ಎ ಸಿ ಪಿ |
| **ವಾಸಸ್ಥಳ** | ಃ ಮೂರ್ನಾಡು |

**ದಿನಾಂಕ ಃ 23-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -**

ನಾನು ಮೇ 2016 ನೇ ಇಸವಿಯಿಂದ 2016 ನೇ ಇಸವಿಯ ಅಕ್ಟೋಬರ್ ತಿಂಗಳವರೆಗೆ ಡಿಸಿಐಬಿ ಮಡಿಕೇರಿಯಲ್ಲಿ ಪೋಲಿಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ಪೊನ್ನಂಪೇಟೆ ಠಾಣಾ ಪ್ರಕರಣ ಸಂ. 82/2016 ರ ಪ್ರಕರಣದಲ್ಲಿ ತನಿಖೆ ಮಾಡುತ್ತಿದ್ದ ಸಂದರ್ಭದಲ್ಲಿ ಸದರಿ ಪ್ರಕರಣದಲ್ಲಿನ ಆರೋಪಿಗಳು ತಮ್ಮ ಸ್ವಇಚ್ಛ ಹೇಳಿಕೆಯಲ್ಲಿ ಈ ಪ್ರಕರಣ ಹಾಗೂ ಇನ್ನೂ ಹಲವು ಪ್ರಕರಣಗಳಲ್ಲಿ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡಿದ್ದು, ಸದರಿ ಪ್ರಕರಣದಲ್ಲಿ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅದೇ ದಿನ ಅಂದರೆ ದಿನಾಂಕ 27-07-2016 ರಂದು ಮಡಿಕೇರಿಯ ಎಸ್ ಪಿಯವರು ಸದರಿ ಪೊನ್ನಂಪೇಟೆ ಪ್ರಕರಣ ಸಂ. 82/2016 ರಲ್ಲಿ ಭಾಗಿಯಾದ ಆರೋಪಿಗಳು ಇನ್ನು ಬೇರೆ ಎಲ್ಲಾ ಪ್ರಕರಣದಲ್ಲಿ ಅವರುಗಳು ಭಾಗಿಯಾಗಿದ್ದ ಪ್ರಕರಣಗಳ ಕಡತದಲ್ಲಿ ನನ್ನಲ್ಲಿಯೇ ತನಿಖೆ ನಡೆಸುವಂತೆ ಆದೇಶ ಮಾಡಿದ್ದು, ಆ ಪ್ರಕಾರ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಂತರ ಅವರುಗಳನ್ನು ಪೋಲಿಸ್ ಕಸ್ಟಡಿಗೆ ನೀಡುವಂತೆ ಮನವಿ ಮಾಡಿ, ಆ ಪ್ರಕಾರ ಆರೋಪಿಗಳನ್ನು ಪೋಲಿಸ್ ಕಸ್ಟಡಿಗೆ ಪಡೆದುಕೊಂಡಿರುತ್ತೇನೆ.

ದಿನಾಂಕ 29-07-2016 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಪೋಲಿಸ್ ಕಸ್ಟಡಿಯಲ್ಲಿದ್ದ 3 ನೇ ಆರೋಪಿಯಾದ ಗಣೇಶ್ ನನ್ನು ನಮ್ಮ ಕಛೇರಿಯಿಂದ ನಮ್ಮ ಇಲಾಖಾ ಜೀಪಿನಲ್ಲಿ ಪೊನ್ನಂಪೇಟೆ ಠಾಣೆಗೆ ಕರೆದುಕೊಂಡು ಹೋಗಿ ಅಲ್ಲಿ ಪಂಚರಾದ ಚಾಸಾ5 ಹಾಗೂ 6 ರವರನ್ನು ಬರಮಾಡಿಕೊಂಡು

This is a True Copy of the Court Records Online. Authenticated @ districts.ecourtsindia.com/cnr/KAKD520013822016/truecopy/order-10.pdf

ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ, ಅವರಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿದ್ದು, ಅದಕ್ಕೆ ಅವರು ಒಪ್ಪಿಕೊಂಡಿದ್ದು, ಆ ಪ್ರಕಾರ ಪಂಚರನ್ನು ಹಾಗೂ 3ನೇ ಆರೋಪಿಯನ್ನು ಆತ ತೋರಿಸಿದ ಆತ ವಾಸವಾಗಿದ್ದ ಪೊನ್ನಂಪೇಟೆಯ ನಿಸರ್ಗ ನಗರದ ಡಾ|| ಸುರೇಂದ್ರರವರ ಲೈನ್ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಮೂರು ಲೈನ್ ಮನೆಗಳಿದ್ದು, ಅವುಗಳಲ್ಲಿ ಮಧ್ಯ ಇರುವ ಲೈನ್ ಮನೆಯಲ್ಲಿ ತಾನು ವಾಸವಾಗಿರುವುದಾಗಿ ತಿಳಿಸಿ ತಾನು ಈ ಪ್ರಕರಣದಲ್ಲಿ ಕಳುವು ಮಾಡಿದ ಎಲ್ ಸಿ ಡಿ ಟಿವಿಯನ್ನು ಇಟ್ಟಿರುವುದಾಗಿ ನಮ್ಮನ್ನು ಕರೆದುಕೊಂಡು ಹೋಗಿ, ಸದರಿ ಎಲ್ ಸಿ ಡಿ ಟಿವಿಯನ್ನು ತೋರಿಸಿಕೊಟ್ಟಿದ್ದು, ನಂತರ ಪಂಚರಾದ ಚಾಸಾ5 ಹಾಗೂ 6 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಸದರಿ ಎಲ್ ಸಿ ಡಿ ಟಿವಿಯನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಮಹಜರನ್ನು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಜರುಗಿಸಿರುತ್ತೇನೆ.

ಸಾಕ್ಷಿಗೆ ನಿಪಿ5ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ 3ನೇ ಆರೋಪಿ ವಾಸವಿದ್ದ ಲೈನ್ ಮನೆಯಲ್ಲಿ ಎಲ್ ಸಿ ಡಿ ಟಿವಿಯನ್ನು ಅಮಾನತ್ತು ಪಡಿಸಿಕೊಳ್ಳುವಾಗ ಜರುಗಿಸಿದ ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ5 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ5(ಸಿ) ಎಂದು ಗುರುತಿಸಲಾಯಿತು. ನಂತರ ಠಾಣೆಗೆ ಹಾಜರಾಗಿ ಸದರಿ ಮುದ್ದೆ ಮಾಲನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 11/2016 ರಂತೆ ದಾಖಲಿಸಿಕೊಂಡು, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ ತನಿಖೆಯನ್ನು ಮುಂದುವರೆಸಿ ನಮ್ಮ ಕಛೇರಿಯಲ್ಲಿ ಪಿರ್ಯಾದುದಾರರಾದ ಚಾಸಾ1 ಹಾಗೂ 2 ರವರ ಮುಂದುವರೆದ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ನಂತರ ಅದೇ ದಿನ ಅಂದರೆ ದಿನಾಂಕ 29-07-2016 ರಂದು ಚಾಸಾ5 ಹಾಗೂ 6 ರವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕ 01-08-2016 ರಂದು ಚಾಸಾ-9 ರಿಂದ 15 ರವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕ 20-08-2016 ರಂದು ನ್ಯಾಯಾಲಯದ ಆದೇಶದ ಮೇರೆಗೆ ಚಾಸಾ1 ಹಾಗೂ 2 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡ ಎಲ್ ಸಿ ಡಿ ಟಿವಿಯನ್ನು ಚಾಸಾ1 ರವರಿಗೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ3 ಹಾಗೂ 4ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಚಾಸಾ1 ರವರಿಗೆ ಎಲ್ ಸಿ ಡಿ ಟಿವಿಯನ್ನು ಬಿಡುಗಡೆ ಮಾಡುವಾಗ ಜರುಗಿಸಿದ ಮಹಜರು ಹಾಗೂ ಆ

This is a True Copy of the Court Records Online. Authenticated @ districts.ecourtsindia.com/cnr/KAKD520013822016/truecopy/order-10.pdf

ಸಮಯದಲ್ಲಿ ತೆಗೆದ ಫೋಟೋ ಎಂದು ಗುರುತಿಸಿ, ನಿಪಿ3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ3(ಸಿ) ಎಂದು ಗುರುತಿಸಲಾಯಿತು.

ನಂತರ ದಿನಾಂಕ 22-09-2016 ರಂದು ಆರೋಪಿಗಳ ವಿರುದ್ಧ ದೋಷರೋಪ ಸಾಬೀತಾದ್ದರಿಂದ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. 1, 3 ಹಾಗೂ 4 ನೇ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. 1 ಹಾಗೂ 3 ನೇ ಆರೋಪಿಗಳು ಗೈರು ಹಾಜರಾಗಿದ್ದು, 1 ಹಾಗೂ 3 ನೇ ಆರೋಪಿಗಳ ಪರ ವಕೀಲರು ಹಾಜರಾತಿ ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು, 1 ಹಾಗೂ 3 ನೇ ಆರೋಪಿಗಳ ಗುರುತಿಸುವಿಕೆ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

**ಪಾಟಿ ಸವಾಲು ಃ ಶ್ರೀ. ಡಿ ಎಂ ಕೆ / ಶ್ರೀ. ಪಿ ಕ ಎಸ್ 3 ನೇ ಆರೋಪಿ ಪರ ವಕೀಲರಿಂದ ಃ**

3 ನೇ ಆರೋಪಿಯ ಮನೆಯ ಅಕ್ಕಪಕ್ಕ ವಾಸದ ಮನೆಗಳಿರುತ್ತವೆ ಎಂದರೆ ಸರಿ. ನಿಪಿ5 ಮಹಜರಿಗೆ 3 ನೇ ಆರೋಪಿಯ ವಾಸದ ಲೈನ್ ಮನೆ ಅಕ್ಕಪಕ್ಕದ ಮನೆಯಲ್ಲಿ ವಾಸವಿರುವ ಯಾರನ್ನು ಪಂಚರಾಗಿ ಮಾಡಿರುವುದಿಲ್ಲ ಎಂದರೆ ಸರಿ. 3 ನೇ ಆರೋಪಿಯು ವಾಸವಿದ್ದ ಲೈನ್ ಮನೆಯ ತಟ್ಟ ಸುರೇಂದ್ರ ಎನ್ನುವವರಿಗೆ ಸೇರಿದ್ದಾಗಿದ್ದು, ಆ ಬಗ್ಗೆ ಯಾವುದೇ ದಾಖಲೆ ಪಡೆದುಕೊಂಡಿರುವುದಿಲ್ಲ. ಸದರಿ ತಟ್ಟ ಸುರೇಂದ್ರ ರವರನ್ನು ವಿಚಾರಣೆ ಮಾಡಿ, ಹೇಳಿಕೆ ದಾಖಲಿಸಿಕೊಂಡಿರುವುದಿಲ್ಲ ಹಾಗೂ ಈ ಪ್ರಕರಣದಲ್ಲಿ ಸಾಕ್ಷಿಯನ್ನಾಗಿ ಮಾಡಿರುವುದಿಲ್ಲ. ನಾನು 3 ನೇ ಆರೋಪಿ ವಾಸವಿದ್ದರು ಎಂದು ಹೇಳಲಾದ ಲೈನ್ ಮನೆಗೆ ಹೋಗಿರುವುದಿಲ್ಲ ಹಾಗೂ ನಿಪಿ5 ರಂತೆ ಮಹಜರ ಕ್ರಮ ಜರುಗಿಸಿ ಯಾವುದೇ ಎಲ್ ಸಿ ಡಿ ಟಿವಿಯನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿ ಸದರಿ ಲೈನ್ ಮನೆಯಲ್ಲಿ ವಾಸವಿದ್ದೆ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ5 ರಂತೆ ಮಹಜರ ಕ್ರಮ ಜರುಗಿಸುವ ಸಮಯದಲ್ಲಿ ಅಲ್ಲಿಗೆ ಚಾಸಾ1 ರವರನ್ನು ಕರೆಸಿರುವುದಿಲ್ಲ. 3 ನೇ ಆರೋಪಿ ನನ್ನ ಸಮಕ್ಷಮ ಯಾವುದೇ ಸ್ವಇಚ್ಛ ಹೇಳಿಕೆ ನೀಡಿರುವುದಿಲ್ಲ ಬದಲಾಗಿ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ನಾನೇ ಅದನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ4 ರಲ್ಲಿ ಕಾಣಿಸಿದ ಟಿವಿಗೂ ಆರೋಪಿಗಳಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ ಬದಲಾಗಿ ಅದನ್ನು ನಾನೇ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಸರಿಯಾದ

This is a True Copy of the Court Records Online. Authenticated @ districts.ecourtsindia.com/cnr/KAKD520013822016/truecopy/order-10.pdf
www.ecourtsindia.com

ತನಿಖೆಯನ್ನು ನಡೆಸದೆ ಅಮಾಯಕನಾದ ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಃ 1ನೇ ಆರೋಪಿ ಪರ ವಕೀಲರಿಂದ ಃ 1ನೇ ಆರೋಪಿ ಪರ ವಕೀಲರು 3ನೇ ಆರೋಪಿ ಪರ ವಕೀಲರು ನಡೆಸಿದ ಪಾಟಿ ಸವಾಲನ್ನು 1ನೇ ಆರೋಪಿ ಪರ ಅಳವಡಿಸಿಕೊಳ್ಳುವಂತೆ ಕೋರಿದ್ದು, ಮನವಿಯನ್ನು ಪುರಸ್ಕರಿಸಿ 3ನೇ ಆರೋಪಿ ಪರ ವಕೀಲರು ನಡೆಸಿದ ಪಾಟಿ ಸವಾಲನ್ನು 1ನೇ ಆರೋಪಿ ಪರ ಅಳವಪಡಿಸಿಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.

This is a True Copy of the Court Records Online. Authenticated @ districts.ecourtsindia.com/cnr/KAKD520013822016/truecopy/order-10.pdf

www.ecourtsindia.com